ಶ್ರೀ ಎಚ್. ಹುಚ್ಚಮಾಸ್ತಿಗೌಡ —ತಾವು ಈಗ ಕೊಟ್ಟ ರತಕ್ಕ ಟ್ಯಾಕ್ಸ್‌ರ್ ಮತ್ತು ಬುರ್‌ಡೋಜರುಗಳ ಬಾಕಿ ಪಟ್ಟಿಗಿಂತಲೂ, ಈ ಸೇಲ್ಸ್ ಟ್ಯಾಕ್ಸ್ ಬಾಕಿದಾರರ ಪಟ್ಟಿ ದೊಡ್ಡದಾಗಿದೆಯೇ ?

Sri KADIDAL MANJAPPA.—I do not remember any figures to have been furnished as referred to by the Hon'ble Member. ಬುರ್‌ಡೋಜರ್ಸ್ ಟ್ಯಾಕ್ಸ್‌ರ ಬಾಕಿದಾರರ ಪಟ್ಟಿಯಂತೆ ಇದಕ್ಕೂ ಒಂದು ಪಟ್ಟಿಯಿದೆ.

Sri R. ANANTARAMAN.—How much sales-tax is due in Bangalore City and Mysore City ?

Mr. SPEAKER.—He is unable to give the information.

Sri R. ANANTARAMAN.—I want the total sales-tax.

Mr. SPEAKER.—That is also understood.

Sri R. ANANTARAMAN.—How much sales-tax is collected in Bangalore City or Mysore City ?

Sri KADIDAL MANJAPPA.—I want notice.

Sri R. ANANTARAMAN.—Is it a fact that an Enquiry Committee has been set up and it is holding an enquiry ?

Sri KADIDAL MANJAPPA.—No, Sir.

ಶ್ರೀ ವಿ. ಆರ್. ನಾಯ್ಡು.—ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳು ವ್ಯಾಪಾರನ್ಯರ ಬಳಿ ಹೋಗಿ ಟ್ಯಾಕ್ಸನ್ನು ವಸೂಲ್ಮಾಡುವಾಗ ಅನುಸರಿಸತಕ್ಕ ಬಗ್ಗೆ ಸರಿಯಾದ ರೀತಿನೀತಿಗಳಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇವೆ. ಅವರು ಸರಿಯಾದ ರೀತಿಯಲ್ಲೇ ಕೇಳುತ್ತಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಅವರು ಸರಿಯಾದ ಲೆಕ್ಕ ಗಳನ್ನು ತೋರಿಸಿದರೂ ಆ ಲೆಕ್ಕ ಪತ್ರಗಳು ಸರಿಯಾಗಿಲ್ಲವೆಂದು, ಅವರ ಮೇಲೆ ಜೋರ್ ಜುಲುಂ ಮಾಡಿ ಬೇರೆ ಲೆಕ್ಕಗಳನ್ನು ಕೊಡಬೇಕೆಂದು ಒತ್ತಾಯ ಪಡಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ.

Mr. SPEAKER.—I do not allow such questions. The Member must thank the Government that they have not revealed the names.

Grant of land for Harijan Colony at Hosaholalu in Krishnarajpet Taluk.

Q.—140. Sri S. M. LINGAPPA (Krishnarajapet).—

Will the Government be pleased to state :—

(*a*) when the land for Harijan Colony at Hosaholalu in Krishnarajapet Taluk was acquired by the Government ;

(*b*) whether they had paid compensation amount or given lands to the raiyats who have lost their lands so acquired ?

A.—Sri K. HANUMANTHAIYA (Chief Minister).—

(*a*) On 3rd August 1949.

(*b*) Compensation has been paid.

ಶ್ರೀ ಎಸ್. ಎಂ. ಲಿಂಗಪ್ಪ.—ಹರಿಜನ ಕಾಲೋನಿ ಗಾಗಿ ಆಕ್ವೈರ್ ಮಾಡಿಕೊಂಡಿರುವ ಜಮೀನಿನ ವಿಸ್ತೀರ್ಣವೆಷ್ಟು ?

*ಶ್ರೀ ಕೆ. ಹನುಮಂತಯ್ಯ.—ಒಂದು ಎಕರೆ.

ಶ್ರೀ ಎಸ್. ಎಂ. ಲಿಂಗಪ್ಪ.—ಆ ಜಮೀನಿನ ಮಾಲೀಕರಿಗೆ ಕೊಟ್ಟ ಪರಿಹಾರದ ಮೊಬಲಗೆಷ್ಟು ?

ಶ್ರೀ ಕೆ. ಹನುಮಂತಯ್ಯ.—920 ರೂಪಾಯಿಗಳು.

ಶ್ರೀ ಎಸ್. ಎಂ. ಲಿಂಗಪ್ಪ.—ಈ ಮೊಬಲಗು ಪಾವತಿ ಯಾದದ್ದು ಯಾವಾಗ ?

Sri K. HANUMANTHAIYA.—My information is, it was paid on 8-2-51.

ಶ್ರೀ ಎಸ್. ಎಂ. ಲಿಂಗಪ್ಪ.—ಅದು ಜಮೀನಿನ ಮಾಲೀಕರಿಗೆ ತಲಪಿದೆಯೇ ?

ಶ್ರೀ ಕೆ. ಹನುಮಂತಯ್ಯ.—ಕೊಟ್ಟಿದ್ದಾರೆಂದು ತಿಳಿದುಬಂದಿದೆ!

ಶ್ರೀ ಎಸ್. ಎಂ. ಲಿಂಗಪ್ಪ.—ಅದು ತಲಪದೆ ಇದ್ದ ಪಕ್ಷದಲ್ಲಿ ಯಾವ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕೆ. ಹನುಮಂತಯ್ಯ.—ಅವರನ್ನು ಕೇಳಿ, ಬರಲಿಲ್ಲವೆಂದು ಅವರು ಹೇಳಿದರೆ, ಕಾರ್ಯಕ್ರಮ ಯೋಚನೆ ಮಾಡೋಣ.

House building grants for Depressed Class people in Pavagada Taluk.

Q.—176. Sri C. T. HANUMANTHAIYA (Pavagada — Scheduled Castes).—

Will the Government be pleased to state :—

(*a*) the amount of grant sanctioned for building houses to depressed class people in Pavagada Taluk from the year 1951 to 1952 ;

* Asterisk indicates that the speeches or remarks have not been revised by the Member concerned.